ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 129/2019

ಡಿ.ಡಬ್ಲ್ಯೂ,2

ದಿಃ **15.05.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಗಣೇಶ್ ಕೆ ಎಂ |
| ಗಂಡ/ತಂದೆಯ ಹೆಸರು | ಮಂಜನಾಯಕ |
| ವಯಸ್ಸು | 44 ವರ್ಷ |
| ಕೆಲಸ | ಮ್ಯಾನೇಜರ್, ಐ ಓ ಬಿ |
| ವಾಸಸ್ಥಳ | ಹುಣಸೂರು |

**ಮುಖ್ಯ ವಿಚಾರಣೆ ಆರೋಪಿ ಪರ ಶ್ರೀ ಎಂ ಕೆ ಎಸ್ ವಕೀಲರಿಂದ:**

ಆರೋಪಿ ನಮ್ಮ ಬ್ಯಾಂಕ್ ನಲ್ಲಿ ಖಾತೆ ಹೊಂದಿರುತ್ತಾರೆ. ಆರೋಪಿಯ ಖಾತೆ ಸಂಖ್ಯೆ 073001000019641. ಸದರಿ ಖಾತೆಗೆ ಸಂಬಂಧಪಟ್ಟಂತೆ ಯಾವುದೇ ಚೆಕ್ ಬುಕ್ issue ಆಗಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

ನಿಪಿ1 ನ್ನು ಸಾಕ್ಷಿಗೆ ತೋರಿಸಲಾಗಿ ಸದರಿ ಚೆಕ್ ನಿಪಿ1 ರಲ್ಲಿ ನಮೂದಾಗಿರುವ ಖಾತೆಗೆ ಸಂಬಂಧಪಟ್ಟ ಚೆಕ್ ಎಂದರೆ ಸರಿ. ನಿಪಿ1 ಕ್ಕೂ ಹಾಗೂ ಆರೋಪಿಗೆ ಸೇರಿರುವ ಖಾತೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿ ಎರಡೂ ಬೇರೆ ಬೇರೆ ಖಾತೆ ಎಂದು ಉತ್ತರಿಸುತ್ತಾರೆ.

ಪಾಟೀ ಸವಾಲು ದೂರುದಾರರ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ

ನಾನು ನ್ಯಾಯಾಲಯದಿಂದ ಸಮನ್ಸ್ whatsapp ನಲ್ಲಿ ಬಂದ ನಂತರ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ಸದರಿ ಸಮನ್ಸ್ ನಲ್ಲಿ ಹಾಜರಾಗಲು ಮಾತ್ರ ಆದೇಶವಿರುತ್ತದೆ, ಬೇರೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಈ ಪ್ರಕರಣವಾಗಿ ನ್ಯಾಯಾಲಯಕ್ಕೆ 4 ಬಾರಿ ಬಂದಿರುತ್ತೇನೆ. ನಾನು ಆರೋಪಿ ಪರ ವಕೀಲರಿಂದ ಯಾವುದೇ ಮಾಹಿತಿ ಪಡೆದಿರುವುದಿಲ್ಲ. ಆರೋಪಿಯ ಖಾತೆ ಸಂಖ್ಯೆ 073001000019641 ಎಂದು ಬ್ಯಾಂಕ್ ನಲ್ಲಿ ಪರಿಶೀಲಿಸಿ ನೋಡಿರುತ್ತೇನೆ. ನಾನೇ ಸ್ವತಃ ಪರಿಶೀಲಿಸಿರುತ್ತೇನೆ. ಪರಮೇಶ್ ಎನ್ನುವ ಹೆಸರಿನ ವ್ಯಕ್ತಿಗಳು ಬಹಳ ಜನರ ಖಾತೆಗಳು ನಮ್ಮ ಬ್ಯಾಂಕ್ ನಲ್ಲಿದೆ, ಎಷ್ಟು ಖಾತೆಗಳು ಇವೆ ಎಂದು

ಪರಿಶೀಲಿಸಬೇಕು. ಖಾತೆ ಸಂಖ್ಯೆ 073001000019641 ಪರಮೇಶ್ ನಾಯಕ್ ರವರ ಹೆಸರಿನಲ್ಲಿದೆ, ಅವರ ತಂದೆ ಹೆಸರು ನೆನಪಿಲ್ಲ. ಅವರು ಕಟ್ಟೆಮಾಳಲವಾಡಿಯವರಾಗಿರಬಹುದು. ಪರಮೇಶ್ ನಾಯಕ್ ಎನ್ನುವವರು ಬಹಳ ಜನರಿರುತ್ತಾರೆ ಅವರಲ್ಲಿ ಒಬ್ಬರ ಖಾತೆ ಸಂಖ್ಯೆ ಅದು ಎಂದರೆ ಸರಿ. ನ್ಯಾಯಾಲಯದಿಂದ ಜಾರಿಯಾದ ಸಮನ್ಸ್ ನಲ್ಲಿ ಆರೋಪಿ ಹೆಸರು ಏನೆಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ಪರಮೇಶ್ ನಾಯಕ್ ಎನ್ನುವವರ ಖಾತೆಯನ್ನು ಪರಿಶೀಲಿಸಿರುತ್ತೇನೆ. ನಾನು ಕೇವಲ ಪರಮೇಶ್ ಎನ್ನುವವರ ಖಾತೆಯನ್ನು ನೋಡಿರುವುದಿಲ್ಲ.

ನಿಪಿ1 ನಮ್ಮ ಬ್ಯಾಂಕ್ ನ ಚೆಕ್ ಎಂದರೆ ಸರಿ. ನಿಪಿ1 ಶಿವಣ್ಣೇಗೌಡರಿಗೆ ನಮ್ಮ ಬ್ಯಾಂಕ್ ನಿಂದ issue ಆಗಿದ್ದು, State Bank of India ಚಲ್ಲಹಳ್ಳಿ ಶಾಖೆಗೆ ನಗದೀಕರಣಕ್ಕಾಗಿ ಹಾಕಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದಾದರೂ ಚೆಕ್ಕನ್ನು ನಗದೀಕರಣಕ್ಕಾಗಿ ಹಾಕಿದರೆ scrutiny ಮಾಡಿ ಹಿಂಬರಹವನ್ನು ನೀಡುತ್ತಾರೆ ಎಂದರೆ ಸರಿ. ನಿಪಿ2 ರಲ್ಲಿ State Bank of India ಚಲ್ಲಹಳ್ಳಿ ಶಾಖೆಯವರು ಸಾಕಷ್ಟು ಹಣವಿಲ್ಲ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿ. ಯಾವುದಾರರೂ ಚೆಕ್ಕನ್ನು ಹಾಕಿದಾಗ ಹೆಸರಿನಲ್ಲಿ ವ್ಯತ್ಯಾಸವಿದ್ದರೆ ಸದರಿ ಬಗ್ಗೆ ಹಿಂಬರಹವನ್ನು ನೀಡುತ್ತಿದ್ದರು ಎಂದರೆ ಸಾಕ್ಷಿ State Bank of India ಚಲ್ಲಹಳ್ಳಿ ಶಾಖೆಯವರು ನೀಡಿರುತ್ತಾರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. Cheque clearance ಆಗಿ ಹಿಂಬರಹವನ್ನು ನೀಡುವಾಗ clearing hub ನಲ್ಲಿ scrutiny ಮಾಡಿ ನೀಡುತ್ತಾರೆ, clearing hub ನಲ್ಲಿ ಎಲ್ಲಾ ಮಾಹಿತಿ ಇರುತ್ತದೆ ಎಂದರೆ ಗೊತ್ತಿಲ್ಲ. ನಿಪಿ1 ಪರಮೇಶ್ ರವರಿಗೆ ಸೇರಿರುವ ಚೆಕ್ಕು ಎಂದರೆ ಸಾಕ್ಷಿ ನಾನು ಈ ಹಿಂದೆ ಹೇಳಿದ್ದ ಖಾತೆ ನಂಬರ್ ಹಾಗೂ ನಿಪಿ1 ರಲ್ಲಿ ಖಾತೆ ಸಂಖ್ಯೆ ಬೇರೆ ಬೇರೆ ಎಂದು ಉತ್ತರಿಸುತ್ತಾರೆ. ನಿಪಿ1 ಪರಮೇಶ್ ಬಿನ್ ಸಿದ್ದಲಿಂಗನಾಯಕ ರವರಿಗೆ ಸೇರಿರುವ ಚೆಕ್ಕು ಎಂದರೆ ಗೊತ್ತಿಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಖಾತೆ ಪರಮೇಶ್ ನಾಯಕ್ ರವರಿಗೆ ಸಂಬಂಧಿಸಿದ್ದು. ನಿಪಿ1 ರಲ್ಲಿ ಕಂಡುಬರುವ ಖಾತೆ ಸಂಖ್ಯೆ ನಾನು ಪರಿಶೀಲಿಸಿರುವುದಿಲ್ಲ ಎಂದರೆ ಸಾಕ್ಷಿ State Bank of India ದವರು ಪರಿಶೀಲಿಸಬೇಕು. ನಾನು ಆರೋಪಿಯೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಪರಮೇಶ್ ನಾಯಕರವರಿಗೆ ಸೇರಿದ ಖಾತೆ ನಂಬರ್ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.